**ಸಾಕ್ಷಿಯನ್ನು ದಿನಾಂಕ 16.10.2025 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಆರ್.ವಿ. ವಕೀಲರಿಂದಃ**

ಜಮೀನು ನಮ್ಮದು ಎಂದು ವೆಂಕಟಪ್ಪನ ಮೇಲೆ ಕೇಸು ಹಾಕಿದ್ದೇವೆ. ದಾವಾ ಸ್ವತ್ತು ನಮ್ಮದ್ದು ಎಂದು ತೋರಿಸಲು ಗ್ರ್ಯಾಂಟ್ ಸರ್ಟಿಫಿಕೇಟ್ ಇದೆ ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ಮುತ್ತಾತನ ಹೆಸರು ತೋಟಿ ಹನುಮಪ್ಪ. ಆ ಬಗ್ಗೆ ದಾಖಲಾತಿ ಕೊಟ್ಟಿದ್ದೇನೆ. ತೋಟಿ ಹನುಮಪ್ಪ ನಮ್ಮ ಮುತ್ತಾತ ಎಂದು ತೋರಿಸಲು ಯಾವ ದಾಖಲಾತಿಯನ್ನು ಕೊಟ್ಟಿದ್ದೀರಾ ಎಂದರೆ ವಂಶವೃಕ್ಷವನ್ನು ಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ45 ವಂಶವೃಕ್ಷವನ್ನು ನೋಟರಿ ಹತ್ತಿರ ಮಾಡಿಕೊಂಡಿರುವ ವಂಶವೃಕ್ಷ ಎಂದರೆ ಸರಿ. ನಾವೇ ಮಾಡಿಕೊಂಡಿರುವ ಸ್ವಯಂ ಘೋಷಿತ ವಂಶವೃಕ್ಷ ಎಂದರೆ ಸರಿ. ಹನುಮಪ್ಪನಿಗೆ ಮೂರು ಜನ ಮಕ್ಕಳು. ಲಕ್ಷ್ಮಮ್ಮ, ಮುನಿವೆಂಕಟಮ್ಮ ಮತ್ತು ದಾಸಪ್ಪ. ತೋಟಿ ಹನುಮಪ್ಪನ ಮುಮ್ಮಗ ನಾನು ಎಂದು ತೋರಿಸಲು ಯಾವುದೇ ವಂಶವೃಕ್ಷವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ನಿಪಿ 44 ಮತ್ತು 45 ಮುನಿಶಾಮಪ್ಪನಿಗೆ ಸಂಬಂಧಪಟ್ಟಿದ್ದಾಗಿದ್ದು ತೋಟಿ ಹನುಮಪ್ಪನಿಗೆ ಸಂಬಂಧಪಟ್ಟಿದಲ್ಲ ಎಂದರೆ ಸರಿಯಲ್ಲ. ಹನುಮಪ್ಪನಿಗೆ ಮೂರು ಜನ ಮಕ್ಕಳು ಅವರ್ಯಾರು ಬದುಕಿಲ್ಲ. ಹನುಮಪ್ಪನಿಗೆ ವೆಂಕಟಪ್ಪ ಎಂದು ಮಗ ಇದ್ದಾನೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಕಾಲಂ ನಂ. 12 ರಲ್ಲಿ ವೆಂಕಟಪ್ಪ ಬಿನ್ ಹನುಮಂತಪ್ಪ ಇದೆ ಎಂದರೆ ಸಾಕ್ಷಿಯು ಅದನ್ನು ಸೃಷ್ಠಿ ಮಾಡಿಕೊಳ್ಳಲಾಗಿದೆ ಎಂದು ನುಡಿಯುತ್ತಾರೆ. ನಿಪಿ3 ಮತ್ತು 4 ರಲ್ಲೂ ಸಹ ವೆಂಕಟಪ್ಪ ಬಿನ್ ಹನುಮಂತಪ್ಪ ಇದೆ ಎಂದರೆ ಸಾಕ್ಷಿಯು ಅದನ್ನು ಸೃಷ್ಠಿ ಮಾಡಿಕೊಳ್ಳಲಾಗಿದೆ ಎಂದು ನುಡಿಯುತ್ತಾರೆ. ವೆಂಕಟಪ್ಪರವರು ಹನುಮಪ್ಪ ಅಲಿಯಾಸ್

ಹನುಮ ರವರ ಮಗ ಎಂದರೆ ಸರಿಯಲ್ಲ. ನಿಪಿ47 ಮತ್ತು 48 ದಾಖಲಾತಿಯನ್ನು ದಾವಾ ಸ್ವತ್ತು ನಮ್ಮದ್ದು ಎಂದು ತೋರಿಸಲು ಕೊಟ್ಟಿದ್ದೇನೆ. ಅದರಲ್ಲಿರುವ ವಿಚಾರಗಳು ಗೊತ್ತಿವೆ. ಏನು ಬರೆಯಲಾಗಿದೆ ಎಂದರೆ ಸಾಕ್ಷಿ ಮೌನವಾಗಿ ನಿಲ್ಲುತ್ತಾರೆ. ನಮ್ಮ ಮುತ್ತಾತನಿಗೆ ಜಮೀನು ಇನಾಮತಿ ಮುಖಾಂತರ ಬಂದಿದೆ. ಯಾವ ವರ್ಷದಲ್ಲಿ ಬಂದಿದೆ ನನಗೆ ನೆನಪಿಲ್ಲ. ಅದು ರಿಗ್ರ್ಯಾಂಟ್ ಆಗಿದೆ. ರಿಗ್ರ್ಯಾಂಟ್ ಯಾವಾಗ ಆಗಿದೆ ನನಗೆ ನೆನಪಿಲ್ಲ. ನಾನು ಈ ಕೇಸನಲ್ಲಿ ತೋಟಿ ಹನುಮನಿಗೆ ದಾಸಪ್ಪ ಒಬ್ಬನೇ ಮಗ ಎಂದು ನಾನು ಹೇಳಿಲ್ಲ.

ದಾವಾ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿದ್ದೇವೆ. ಸುಮಾರು 50 ವರ್ಷಗಳಿಂದ ಸ್ವಾಧೀನದಲ್ಲಿದ್ದೇವೆ. ಕೇಸನ್ನು ಹಾಕಲು ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ಕೇಸು ಹಾಕುವ ಕಾಲಕ್ಕೆ ದಾವಾ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಸ್ವಾಧೀನದಲ್ಲಿದ್ದೇವೆ ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ. ದಾವಾ ಆಸ್ತಿಯು ನನಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ನಾರಾಯಣಮ್ಮ ರವರು ದಾವಾ ಸ್ವತ್ತಿನಲ್ಲಿ ಸ್ವಾಧೀನತೆಯಲ್ಲಿದ್ದು ದಾವಾ ಆಸ್ತಿಯು ಅವರಿಗೆ ಸಂಬಂಧಪಟ್ಟಿದೆ ಎಂದರೆ ಸರಿಯಲ್ಲ. ತೋಟಿ ಹನಮ ರವರು ತೋಟಿ ಕೆಲಸ ಮಾಡುತ್ತಿದ್ದು ಸರ್ಕಾರದಿಂದ ಅವರಿಗೆ ಎಚ್ ಒ ಎ 18/72.73 ರ ಆದೇಶದಂತೆ ದಿಃ31.07.1972 ರಂತೆ ಆದೇಶ ಆಗಿದೆ ಎಂದರೆ ಸರಿ. ಗ್ರ್ಯಾಂಟ್ ಆದ ಹನುಮ ತೀರಿಕೊಂಡಿದ್ದಾರೆ ಎಂದರೆ ಸರಿ. ದಿಃ14.05.1976 ರಲ್ಲಿ ಅಸಿಸ್ಟಂಟ್ ಕಮೀಷನರ್ ಚಿಕ್ಕಬಳ್ಳಾಪುರ ರವರು ಎಚ್ ಒ ಎ 1 ತೋಟಿ.ಆರ್ 73/74 ರಂತೆ ವೆಂಕಟಪ್ಪ ಬಿನ್ ತೋಟಿ ಹನುಮ ರವರಿಗೆ ರಿಗ್ರ್ಯಾಂಟ್ ಆಗಿದೆ ಎಂದರೆ ಅವರು ಪೊರ್ಜರಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಾವು ಕೊಟ್ಟಿರುವ ನಿಪಿ 48 ಅದೇ ಆಗಿದೆ ಎಂದರೆ ಸರಿಯಲ್ಲ.

ನಿಪಿ 48 ರಲ್ಲಿ ಹನಮ ರವರು ವೆಂಕಟಪ್ಪ ರವರ ಮಗ ಅವರು ಆಸ್ತಿಯಲ್ಲಿ ಸ್ವಾಧೀನದಲ್ಲಿರುವುದರಿಂದ ಅವರಿಗೆ ರಿಗ್ರ್ಯಾಂಟ್ ಆಗಿದೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಅದೇ ಆದೇಶದಲ್ಲಿ ಮುನಿಸ್ವಾಮಿ ರವರಿಗೆ ನೋಟಿಸ್ ಕೊಟ್ಟು, ನಿಮ್ಮ ಯಾವುದಾದರೂ ದಾಖಲಾತಿ ಇದ್ದರೇ ಹಾಜರು ಮಾಡಿ ಎಂದು ತಿಳಿಸಿದ್ದು, ಅವರು ಬಂದಿರುವುದಿಲ್ಲ ಆದಕಾರಣ ಅವರಿಗೆ ಯಾವುದೇ ಹಕ್ಕಿಲ್ಲ ಎಂದು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ಅದರಂತೆ ವೆಂಕಟಪ್ಪ ರವರು ತೋಟಿ ಹನುಮ ರವರ ಮಗನಾದ ಕಾರಣ ಅವರ ಹೆಸರಿಗೆ ಖಾತೆ ಮಾಡಿ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ವೆಂಕಟಪ್ಪ 1 ನೇ ಪ್ರತಿವಾದಿಯ ಗಂಡ ಎಂದರೆ ಸಾಕ್ಷಿಯು ಹೌದು ಎಂದು ನುಡಿದು ನಂತರ ನನಗೇನು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈ ಕೇಸಿನಲ್ಲಿ 1 ನೇ ಪ್ರತಿವಾದಿಯ ಗಂಡ ವೆಂಕಟಪ್ಪ ಎಂದು ತೋರಿಸಿದ್ದೇವೆ. ಸದರಿ ವೆಂಕಟಪ್ಪನಿಗೆ ದಾವಾ ಸ್ವತ್ತು ರಿಗ್ರ್ಯಾಂಟ್ ಆಗಿರುವುದು ಎಂದರೆ ಸರಿಯಲ್ಲ. ಆ ರೀತಿ ರಿಗ್ರ್ಯಾಂಟ್ ಆದ ನಂತರವೇ ತಹಶೀಲ್ದಾರರು ಖಾತೆ ಪಹಣಿ ಮಾಡಿಕೊಟ್ಟಿದ್ದಾರೆ ಎಂದರೆ ಪೋರ್ಜರಿ ಮಾಡಿಕೊಂಡಿದ್ದಾರೆ. ದಾಖಲಾದ ನಂತರ ಮತ್ತು ವೆಂಕಟಪ್ಪ ಮತ್ತು ಅವರ ಕುಟುಂಬದವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ವೆಂಕಟಪ್ಪ ತೀರಿಕೊಂಡ ನಂತರ ಅವರ ಹೆಂಡತಿ 1 ನೇ ಪ್ರತಿವಾದಿಗೆ ಖಾತೆ ಪಹಣಿ ಆಗಿದೆ ಎಂದರೆ ಸರಿಯಲ್ಲ. ನಾವಾಗಲೀ ನಮ್ಮ ತಂದೆಯಾಗಲೀ ನಮ್ಮ ತಾತನಾಗಲೀ ದಾವಾ ಸ್ವತ್ತಿನಲ್ಲಿ ಎಂದಿಗೂ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಇದೆಲ್ಲಾ ಆದ ನಂತರ ಸರ್ವೆ ನಂ. 91 ರಲ್ಲಿ ವೆಂಕಟಪ್ಪ ರವರು 20 ಗುಂಟೆ ಮಾರಾಟ ಮಾಡಬೇಕೆಂದು ಸರ್ಕಾರಿ ವತಿಯಿಂದ ಅನುಮತಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಅನುಮತಿ ಪಡೆದು ಕೃಷ್ಣಪ್ಪ ರವರಿಗೆ 20 ಗುಂಟೆ ಜಮೀನು

ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಕೃಷ್ಣಪ್ಪ ರವರು ಖರೀದಿ ಮಾಡಿದ ನಂತರ ಖಾತೆ ಪಹಣಿಗಳೆಲ್ಲಾ ಕೃಷ್ಣಪ್ಪ ರವರ ಹೆಸರೇ ಬರುತ್ತಿದೆ ಮತ್ತು ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ವೆಂಕಟಪ್ಪ ರವರು ದಾಖಲಾತಿಯನ್ನು ಫೋರ್ಜರಿ ಮಾಡಿಕೊಂಡಿದ್ದಾರೆ ಎಂದು 25 ವರ್ಷಗಳ ಹಿಂದೆ ಗೊತ್ತಾಯಿತು ಸಾಕ್ಷಿ ಮತ್ತೆ ನುಡಿಯುತ್ತಾರೆ 5 ವರ್ಷಗಳ ಹಿಂದೆ ಗೊತ್ತಾಯಿತು ಎಂದು ನುಡಿಯುತ್ತಾರೆ. ತಹಶೀಲ್ದಾರರು ಪಹಣಿ ಮ್ಯುಟೇಶನ್ ಮಾಡುವ ಮೊದಲು ನಂತರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಫೋರ್ಜರಿ ಮಾಡಿದ ನಂತರ ನಾನು ಯಾವುದೇ ಅಪೀಲು ಹೋಗಿಲ್ಲ. ನಾವು ಎಸಿ ನ್ಯಾಯಾಲಯದಲ್ಲಿ ಮತ್ತು ತಹಶೀಲ್ದಾರ ನ್ಯಾಯಾಲಯದಲ್ಲಿ ಅಪೀಲು ಹೋಗಿದ್ದೇವೆ ಅದರ ದಾಖಲಾತಿಗಳನ್ನು ಕೊಟ್ಟಿದ್ದೇನೆ. ನನಗೆ ಫೋರ್ಜರಿ ವಿಚಾರ ಇಂದಿನಿಂದ 5 ವರ್ಷಗಳ ಹಿಂದೆ ಗೊತ್ತಾಗಿದ್ದು ನಾನು ಕೂಡಲೇ ದಾಖಲಾತಿಗಳನ್ನು ಪಡೆದುಕೊಂಡು ದಾವೆಯನ್ನು ಸಲ್ಲಿಸಿದ್ದೇನೆ. ನನಗೆ 25 ವರ್ಷಗಳ ಹಿಂದೆಯೇ ದಾಖಲಾತಿಗಳು ಪ್ರತಿವಾದಿಯ ಹೆಸರಿನಲ್ಲಿ ಗೊತ್ತಿದ್ದರಿಂದಲೇ ಮತ್ತು ಅವರೇ ಸ್ವಾಧೀನದಲ್ಲಿದ್ದಾರೆ ಎಂದು ತಿಳಿದಿದ್ದರಿಂದಲೇ ಪ್ರತಿವಾದಿಗಳು ಸ್ವಾದೀನದಲ್ಲಿದ್ದಾರೆ ಎಂದು ವಾದ ಪತ್ರವದಲ್ಲಿ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವುದೇ ಸ್ವಾಧೀನದಲ್ಲಿಲ್ಲ ಹಾಗೂ ಮುನಿಸ್ವಾಮಿ ಬಿನ್ ದಾಸಪ್ಪ ರವರು ಅರ್ಜಿ ವಜಾ ಆಗಿರುವ ಕಾರಣ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ರಿಗ್ರ್ಯಾಂಟ್ ಆರ್ಡರ್ 5 ವರ್ಷದ ಮುಂಚೆ ಗೊತ್ತಾಗಿರುತ್ತದೆ. ನಮ್ಮ ಪನಸಚೌಡನಹಳ್ಳಿಯಲ್ಲಿದ್ದಾರೆ. ನಾನು ಕೆರನಹಳ್ಳಿಯಲ್ಲಿದ್ದೇನೆ. ನಾನು ಎರಡು ಕಡೆ ಓಡಾಡುತ್ತೇನೆ. ನಮ್ಮ ತಾತ ಪನಸಚೌಡನಹಳ್ಳಿಯಲ್ಲಿದ್ದಾರೆ ದಾಖಲಾತಿ ಕೊಟ್ಟಿದೇನೆ. ನಾನು ಎರಡು ಕಡೆ ವಾಸ ಮಾಡುತ್ತೇನೆ ಎಂದು ದಾಖಲಾತಿ ಕೊಟ್ಟಿದ್ದೇನೆ. ನಿಪಿ45 ರಲ್ಲಿ ನಾನು ಕೆರನಹಳ್ಳಿಯಲ್ಲಿ ವಾಸ ಮಾಡುತ್ತೇನೆ ಎಂದು ಹೇಳಿದ್ದೇನೆ. ನಾನು ತೋಟಿ ಹನುಮಪ್ಪನಿಗೆ

ಸಂಬಂಧಿಕನಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊಡೆಯಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವರೇ ಫೋರ್ಜರಿ ಮಾಡಿದ್ದಾರೆ.

ನನ್ನ ತಂದೆ ತೀರಿಕೊಂಡು 25 ವರ್ಷಗಳಾಯಿತು. ನನ್ನ ತಂದೆ ಜೀವಿತಾವಧಿಯಲ್ಲಿ ನಾನು ದಾಖಲಾತಿಗಳನ್ನು ನೋಡಿಕೊಂಡಿಲ್ಲ. ನಮ್ಮ ತಂದೆಗೆ ಹಕ್ಕಿಲ್ಲ ಎಂದು ಎಲ್ಲಾರಿಗೂ ಗೊತ್ತಿದ್ದರಿಂದ ನಾವು ಸುಮ್ಮನಿದ್ದೇವು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.